ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂ: 733/2019

ಚಾಸಾ:( 01 ) ಪ್ರಾಸಾ ( 01 )

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕ: 28-10-2025

| | |
|---|---|
| ಸಾಕ್ಷಿದಾರರ ಹೆಸರು | ಈರಮ್ಮ |
| ತಂದೆ ಹೆಸರು | ಗಂಡ ಸಂಗಪ್ಪ ಗೊಂಡಿ |
| ವಯಸ್ಸು | 42 ವರ್ಷ, |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಹಿರೇ ಬೊಮ್ಮನಾಳ |

**ಮುಖ್ಯ ವಿಚಾರಣೆ: ಸಸಅ ರವರಿಂದ:**

ಚಾಸಾ 4 ರಿಂದ 6 ರವರ ಪರಿಚಯ ಇದೆ. 1 ನೇ ಆರೋಪಿ ನನ್ನ ಪತಿ, 3 ನೇ ಆರೋಪಿ ನನ್ನ ನೆಗೇಣಿ, 2 ನೇ ಆರೋಪಿ ನನ್ನ ಮಾವ ಇರುತ್ತಾರೆ. ನನ್ನ ಮತ್ತು 1 ನೇ ಆರೋಪಿಯ ಮದುವೆ 26 ವರ್ಷಗಳ ಹಿಂದೆ ಅಗಿರುತ್ತದೆ. ಅದರ ದಿನಾಂಕ ಮತ್ತು ವರ್ಷ ನೆನಪು ಇರುವುದಿಲ್ಲ. ಮದುವೆಯಾದ ನಂತರ 1 ನೇ ಆರೋಪಿಯು ನನನ್ನು 3 ವರ್ಷಗಳ ಕಾಲ ಚೆನ್ನಾಗಿ ನೋಡಿಕೊಂಡಿರುತ್ತಾನೆ. ಸದರಿ ಸಂಸಾರದಿಂದ ನನಗೆ ಒಬ್ಬ ಹೆಣ್ಣು ಮಗಳು ಜನಿಸಿರುತ್ತಾಳೆ. ನನ್ನ ಮದುವೆಯಾಗಿ 3 ವರ್ಷಗಳ ನಂತರ ನನ್ನ ಪತಿ ಬೇರೊಬ್ಬ ಮುಸ್ಲಿಂ ಮಹಿಳೆಯನ್ನು ಮದುವೆಯಾಗಿರುತ್ತಾನೆ. 1 ನೇ ಆರೆೋಪಿ ನನ್ನ ಪತಿ, 2 ರಿಂದ 4 ನೇ ಆರೋಪಿತರು ಕೂಡಿಕೊಂಡು ನನಗೆ ಕಿರುಕುಳ ನೀಡಿರುತ್ತಾರೆ. 1 ನೇ ಆರೆೋಪಿ ಮತ್ತು 2 ರಿಂದ 4 ನೇ ಆರೋಪಿತರು ಕೂಡಿಕೊಂಡು ದಿ: 04-05-2019 ರಂದು ನನಗೆ ದೈಹಿಕ ಹಲ್ಲೆ ಮಾಡಿ, ಅವಾಚ್ಯವಾಗಿ ಬೆದಾಡಿರುತ್ತಾರೆ. 1 ನೇ ಆರೋಪಿ ನನಗೆ ಹೊಡೆದಿದ್ದು, 2 ರಿಂದ 4 ನೇ ಆರೋಪಿತರು ನನಗೆ ಅವಾಚ್ಯವಾಗಿ ಬೈದಾಡಿರುತ್ತಾರೆ. ನಂತರ ಸದರಿ ಗಲಾಟೆಯನ್ನು ನಿಂಗವ್ವ ಮತ್ತು ಹನುಮಂತಪ್ಪ ಜಗಳ ಬಿಡಿಸಿರುತ್ತಾರೆ. ನಂತರ ನಾನು ಠಾಣೆಗೆ ಬಂದು ಅಬಗ್ಗೆ ನಾನು ದೂರು ದಾಖಲಿಸಿರುತ್ತೇನೆ. ದೂರನ್ನು ನೋಡಿ ಸಾಕ್ಷಿ ಗುರುತಿಸಿದ್ದು ಸದರಿ ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನಂತರ ಮಾರನೇ ದಿನ ಪೋಲಿಸರು ಗುನ್ನಜಾಗಕ್ಕೆ ಬೆ. 09.30 ಗಂಟೆಗೆ ಬಂದು ನನ್ನ ಬಳಿ ತನಿಖೆ ಮಾಡಿ ಏನೋ ಬರೆದುಕೊಂಡು ಹೋಗಿರುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಪಂಚನಾಮೆಯಾಗಿದ್ದು ಸದರಿ ಪಂಚನಾಮೆಯನ್ನು ನಿಪಿ 2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ</u>**

ಗಲಾಟೆಯಾದಾಗ ನನ್ನ ಮದುವೆ ಅಗಿ 18 ವರ್ಷ ಅಗಿತ್ತು ಎಂದು ಬರೆಸಿರುತ್ತೇನೆ. ಮದುವೆಯಾದ ನಂತರ ಮೂರು ವರ್ಷಗಳ ವರೆಗೆ ನಾನು ಮತ್ತು ನನ್ನ ಪತಿ ಚೆನ್ನಾಗಿ ಇದ್ದೇವು ನನ್ನ ಮಗಳು ನೀಲಮ್ಮ ಜನಿಸಿದ ನಂತರ ನಾವು ಚೆನ್ನಾಗಿ ಇದ್ದೇವು. ನನ್ನ ಮಗಳು ಸಂತೋಷ ತಂದೆ ಹನುಮಪ್ಪ ಬೇವೂರುರವರನ್ನು ಮದುವೆಯಾಗಿರುತ್ತಾಳೆ. ನನ್ನ ತವರು ಮನೆ ನೆಲಜೇರಿ ಗ್ರಾಮ. ನಾನು ನನ್ನ ಗಂಡನ ಮನೆ ಹಿರೇಬೊಮ್ಮನಾಳ ಗ್ರಾಮದಲ್ಲಿ ಬೇರೆ ಬೇರೆ ವಾಸ ಇರುತ್ತೇವೆ. ನಾನು ವಾಸವಾಗಿರುವ ಮನೆ ನನ್ನ ಮಾವನ ಹೆಸರಿನಲ್ಲಿ ಇತ್ತು. ನನ್ನ ಮದುವೆಯಾಗಿ 5 ವರ್ಷಕ್ಕೆ ಒಂದು ಮನೆ, 4 ಎಕರೆ ಜಮೀನು ಕೊಟ್ಟಿರುತ್ತಾರೆ. ಸದರಿ ಜಮೀನು ನನ್ನ ಮಾವ 2 ನೇ ಆರೋಪಿಯ ಹೆಸರಿನಲ್ಲಿ ಇದೆ. ನಾನು ಸಾಕಷ್ಟು ಬಾರಿ ನಾನು ವಾಸವಾಗಿರುವ ಮನೆ ಮತ್ತು ಹೊಲವನ್ನು ನನ್ನ ಹೆಸರಿಗೆ ಮಾಡಿಸಿಕೊಂಡುವಂತೆ ಕೇಳಿರುತ್ತೇನೆ ಅದರೇ ಮಾಡಿ ಕೊಟ್ಟಿರುವುದಿಲ್ಲ. ಯಾವುದೇ ಸಮಂಜಸಕಾರಣ ಇಲ್ಲದೇ ಜಮೀನು ಮತ್ತು ಮನೆಯನ್ನು ನನ್ನ ಹೆಸರಿಗೆ ಮಾಡಿ ಕೊಟ್ಟಿರುವುದಿಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ.